ಅಸಲು ದಾವೆ ನಂ.158/2021

ಪಿ.ಡಬ್ಲೂಃ 2- ಜುನೇದ್ ಪಾಷಾ ಬಿನ್ ಹೆಚ್. ಖಾದರ್ ಪಾಷಾ

ದಿನಾಂಕಃ 24/06/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ವಾದಿಯರ ಪರವಾಗಿ ಶ್ರೀಮತಿ ಕೆ.ಪಿ.ಕೆ. ವಕೀಲರಿಂದ**

ನಾನು ಈ ದಾವೆಯಲ್ಲಿ 2 ನೇ ವಾದಿ ಆಗಿದ್ದು ನ್ಯಾಯಾಲಯದ ಮುಂದೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಈ ದಾವೆಯಲ್ಲಿ ಈಗಾಗಲೇ 1 ನೇ ವಾದಿಯು ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿ ಸಾಕ್ಷ್ಯ ನುಡಿದು ನಿಪಿ-1 ರಿಂದ 24 ರಂತೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ ಆದರೆ ನಂತರ ಅವರು ನ್ಯಾಯಾಲಯಕ್ಕೆ ಹಾಜರು ಇರದೇ ಇರುವುದರಿಂದ ನ್ಯಾಯಾಲಯವು ಅವರ ಸಾಕ್ಷ್ಯವನ್ನು ರದ್ದು ಪಡಿಸಿದ್ದು ಅವರ ಮೂಲಕ ಗುರುತಿಸಲಾದ ದಾಖಲೆಗಳನ್ನು ನನ್ನ ಮೂಲಕ ಗುರುತಿಸಲಾಗಿರುತ್ತದೆ ಎಂದು ಪರಿಗಣಿಸಬೇಕಾಗಿ ನಾನು ಮಾನ್ಯ ನ್ಯಾಯಾಲಯಕ್ಕೆ ಕೇಳಿಕೊಳ್ಳುತ್ತೇನೆ ಮತ್ತು ಈ ದಾವೆಯನ್ನು ಡಿಕ್ರಿಗೊಳಿಸಬೇಕಾಗಿ ಪಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು ಪ್ರತಿವಾದಿ ಪರವಾಗಿ**

1 ನೇ ಪ್ರತಿವಾದಿಯು ಏಕಪಕ್ಷೀಯವಾಗಿರುತ್ತಾರೆ.

2 ಮತ್ತು 3 ನೇ ಪ್ರತಿವಾದಿಯರು ಹಾಗೂ ಅವರ ಪರ ವಕೀಲರನ್ನು ಕೂಗಿಸಲಾಯಿತು. ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

4 ರಿಂದ 6 ನೇ ಪ್ರತಿವಾದಿಯರ ಪರ ಶ್ರೀ ಎಂ.ಪಿ.ಆರ್. ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್ (ಸಂಚಾರಿ ಪೀಠ ಬಂಗಾರಪೇಟೆ).